# ಆಧುನಿಕ ಮಹಿಳೆಯ ಪ್ರೇರಕಶಕ್ತಿ ಶ್ರೀಮಾತೆ ಶಾರದಾದೇವಿ

◆ ಪ್ರವ್ರಾಜಿಕಾ ಧರ್ಮಪ್ರಾಣಾ

ಮನುಕುಲದ ಇತಿಹಾಸವನ್ನು ರೂಪಿಸಿರುವ ಒಂದು ಅದ್ಭುತ ಶಕ್ತಿಯೇ ಸ್ತ್ರೀಶಕ್ತಿ. ನಾರಿಯರ ಮೂಲಕ ಪ್ರಕಟವಾಗಿರುವ ಆ ಜಗನ್ಮಾತೆಯ ಶಕ್ತಿಯೇ ಸಮಾಜದ, ದೇಶದ ಪುರೋಭಿವೃದ್ಧಿಗೆ ಕಾರಣವಾಗಿದೆ. ಕೆಲವು ಸ್ತ್ರೀಯರಲ್ಲಿ ಆಧ್ಯಾತ್ಮಿಕ ವರ್ಚಸ್ಸಾಗಿಯೂ, ವಿದ್ಯಾ ವಿನಯ ಸಂಪತ್ತಾಗಿಯೂ, ಸ್ನೇಹಮಯ ಕರುಣೆಯಾಗಿಯೂ ಆ ಮಹಾಶಕ್ತಿ ಪ್ರಕಟಗೊಳ್ಳುವುದನ್ನು ಕಾಣಬಹುದು. ಆದರೆ ಅನೇಕ ಸ್ತ್ರೀಯರು ಇಂದೂ ಅಬಲೆಯರಾಗಿ, ಅವಿದ್ಯಾರೂಪಿಣಿಯರಾಗಿ, ಅಜ್ಞಾನದ ಬಂಧನದಲ್ಲಿ ತೊಳಲಾಡುತ್ತಿರುವುದು ಬದುಕಿನ ಒಂದು ದೊಡ್ಡ ವಿಪರ್ಯಾಸ. ಬದುಕಿನುದ್ದಕ್ಕೂ ನೋವು, ಕಷ್ಟಗಳನ್ನು ಸಹಿಸಿಕೊಂಡು ಬಂದು ಕ್ಷಮಯಾ ಧರಿತ್ರೀ (ಭೂಮಿಯಂತೆ ಕ್ಷಮೆಯುಳ್ಳವಳು) ಎಂದೇ ಗುರುತಿಸಲ್ಪಟ್ಟಿರುವ ಭಾರತೀಯ ನಾರಿಯ ಅಪಾರ ಕಷ್ಟಸಹಿಷ್ಣುತೆಯ ಶಕ್ತಿಗೆ, ಬದುಕುವ ಛಲಕ್ಕೆ, ಜೀವನ್ಮುಖಿಯಾದ ನಿಲುವಿಗೆ ನಮ್ಮ ಇತಿಹಾಸವೇ ಸಾಕ್ಷಿಯಾಗಿದೆ. ಆಧ್ಯಾತ್ಮಿಕ ಜೀವನದಲ್ಲಿ ಮಹಾ ವಿರಾಗಿಣಿಯಾಗಿ, ಮಹಾತಪಸ್ವಿನಿಯಾಗಿ, ಮಹಾವಿದುಷಿಯಾಗಿ ತನ್ನ ಜೀವನದ ಸೌರಭವನ್ನು ಪ್ರಪಂಚಕ್ಕೆ ಸೂಸುತ್ತಿರುವ ಆದರ್ಶ ನಾರಿಯ ಯಶೋಗಾಥೆ ಒಂದು ಕಡೆ ಆದರೆ, ಬದುಕಿನ ಅರ್ಥವನ್ನು ತಿಳಿಯದೆ ಅಜ್ಞಾನ ದುಃಖ ಮೌಢ್ಯಗಳಿಂದ ನರಳುತ್ತಿರುವ ಸಹಸ್ರಾರು ನಾರಿಯರ ಮೂಕವೇದನೆ ಮತ್ತೊಂದು ಕಡೆ. ಇವರ ದುಃಖಕ್ಕೆ, ಅಜ್ಞಾನಕ್ಕೆ ಅಂತ್ಯವೇ ಇಲ್ಲವೇ?

ಸ್ವಾಮಿ ವಿವೇಕಾನಂದರು ಹೇಳಿದಂತೆ ತಮ್ಮ ಜೀವನವನ್ನು ತಾವೇ ನಿರ್ಧರಿಸಿ ಹೋರಾಡಿದ ಹೊರತು, ತಮ್ಮ ಜೀವನವನ್ನು ತಾವೇ ರೂಪಿಸಿದ ಹೊರತು ಬೇರೆ ಯಾರೂ ನಾರಿಯರನ್ನು ಉದ್ಧಾರ ಮಾಡಲು ಸಾಧ್ಯವಿಲ್ಲ. ಸ್ವಾಮಿ ವಿವೇಕಾನಂದರು ತಮ್ಮ ಪರಿವ್ರಾಜಕ ಜೀವನದ ಸಮಯದಲ್ಲಿ ಅಲ್ಮೋರಾದಲ್ಲಿ ಕೆಲವು ದಿನಗಳಿದ್ದರು. ಅಲ್ಲಿಯ ಒಂದು ಶಿಖರದ ಮೇಲೆ ನಿರ್ಜನ ವಾಸಿಯಾಗಿ ಧ್ಯಾನದಲ್ಲಿ ದಿನಗಳನ್ನು ಕಳೆಯುತ್ತಿದ್ದರು. ತಮ್ಮ ಗುರುದೇವನಂತೆ ಸ್ಪರ್ಶಮಾತ್ರದಿಂದ ವ್ಯಕ್ತಿಯ ಜಾತಕವನ್ನೇ ಬದಲಿಸುವ ಶಕ್ತಿಯ ಸಿದ್ಧಿಗಾಗಿ ದೃಢ ಸಂಕಲ್ಪದಿಂದ ಉಗ್ರವಾದ ತಪಸ್ಸಿನಲ್ಲಿ ಮುಳುಗಿಹೋದರು. ಆದರೆ ಒಂದು ದಿನ ಹಠಾತ್ತಾಗಿ ಅವರ ಸಹೋದರಿ ಆತ್ಮಹತ್ಯೆಯನ್ನು ಮಾಡಿಕೊಂಡ ಸಮಾಚಾರ ಅವರ ಹೃದಯವನ್ನು ನಡುಗಿಸಿತು. ತನ್ನ ಸಹೋದರಿಯು



ಬದುಕನ್ನು ಭೀಕರವಾಗಿ ಅಂತ್ಯಗೊಳಿಸಿಕೊಂಡ ದುರಂತವನ್ನು ಅವರಿಂದ ಸಹಿಸಲಾಗಲಿಲ್ಲ. ತಮ್ಮ ಸಹೋದರಿಯಂತೆಯೇ ಭಾರತದಾದ್ಯಂತ ನಾರಿಯ ಜೀವನದ ಅತ್ಯಂತ ಶೋಚನೀಯ ಸ್ಥಿತಿಯನ್ನು ಕುರಿತು ಅವರು ಚಿಂತಿತರಾದರು. ಭಾರತದ ಮಹಿಳೆಯರಿಗಾಗಿ ತಾವು ಏನಾದರೂ ಮಾಡಬೇಕೆಂದು ಅಂದೇ ತೀರ್ಮಾನಿಸಿದರು. ಧ್ಯಾನದಲ್ಲಿ ಮುಳುಗಿರಬೇಕೆಂಬ ತಮ್ಮ ಹಂಬಲಕ್ಕೆ ವಿರಾಮ ಹೇಳಿ ಆ ಉನ್ನತವಾದ ಶಿಖರದಿಂದ ಕೆಳಗಿಳಿದು ಬಂದರು. ದೇಶಾದ್ಯಂತ ಸಂಚರಿಸುತ್ತ ಭಾರತೀಯ ನಾರಿಯ ಅತ್ಯಂತ ಶೋಚನೀಯ ಪರಿಸ್ಥಿತಿಯನ್ನು ಕಣ್ಣಾರೆ ಕಂಡು ಒಂದು ನಿರ್ಣಯಕ್ಕೆ ಬಂದರು: ನಾರಿಯರ ಉದ್ಧಾರವಾಗದೆ ದೇಶದ ಏಳ್ಗೆ ಸಾಧ್ಯವಿಲ್ಲ. ಈ ನಿರ್ಣಯವೇ ಮುಂದೆ ಅವರ ಕಾರ್ಯಪ್ರಣಾಲಿಯಲ್ಲಿ ಪ್ರಮುಖವಾದ ಪಾತ್ರ ವಹಿಸಿತು. ಪಾಶ್ಚಾತ್ಯ ದೇಶಗಳಲ್ಲಿ ಸಂಚರಿಸುತ್ತಿದ್ದಾಗ ಅಲ್ಲಿಯ ಮಹಿಳೆಯರ ಜೀವನದ ಉತ್ತಮ ಸ್ಥಿತಿಯನ್ನೂ, ಅವರ ದಕ್ಷತೆ, ಕಾರ್ಯಕ್ಷಮತೆಗಳನ್ನೂ ಕಂಡು ಅವರ ಮೂಲಕವೇ ಭಾರತೀಯ ನಾರಿಯರ

ಅರುಣಾಚಲ ಪ್ರದೇಶದ ಖೋನ್ಸಾದಲ್ಲಿರುವ ಶಾರದಾ ಮಠದಲ್ಲಿ ಸಂನ್ಯಾಸಿನಿಯಾಗಿ ಸೇವೆ ಸಲ್ಲಿಸುತ್ತಿರುವ ಲೇಖಕಿ ಸ್ತ್ರೀಯರ ಪ್ರಸ್ತುತ ಸಮಸ್ಯೆಗಳನ್ನು ಕುರಿತು ಶ್ರೀಮಾತೆ ಶಾರದಾದೇವಿಯವರ ಜೀವನದ ಬೆಳಕಿನಲ್ಲಿ ಗಾಢವಾಗಿ ಚಿಂತಿಸಿದ್ದಾರೆ.

ಉದ್ಧಾರದ ಕಾರ್ಯವನ್ನು ಸಾಧಿಸಬೇಕೆಂದು ತೀರ್ಮಾನಿಸಿದರು. ತಮ್ಮ ಶಿಷ್ಯೆಯಾದ ಸೋದರಿ ನಿವೇದಿತೆಗೆ ಬರೆದ ಪತ್ರವೊಂದರಲ್ಲಿ ತಮ್ಮ ಆಶಯವನ್ನು ವ್ಯಕ್ತಪಡಿಸುತ್ತಾರೆ, "ಭಾರತಕ್ಕಾಗಿ ಕೆಲಸ ಮಾಡಲು ನಿಜವಾಗಿ ಬೇಕಾಗಿರುವುದು ಒಬ್ಬಳು ಮಹಿಳೆ. ... ಸಿಂಹಸದೃಶವಾದ ಸಾಹಸ, ಹೃದಯವುಳ್ಳ ಮಹಿಳೆ." ತಮ್ಮ ಗುರುದೇವನ ಈ ಮಹತ್ಕಾರ್ಯವನ್ನು ಕೈಗೊಳ್ಳಲು ಅವರ ಶಿಷ್ಯೆಯರಾದ ಸೋದರಿ ನಿವೇದಿತಾ ಮೊದಲಾದವರು ಭಾರತಕ್ಕೆ ಬಂದು ಇಲ್ಲಿಯ ಸ್ತ್ರೀಯರ ಉದ್ಧಾರಕ್ಕಾಗಿ ತಮ್ಮ ಜೀವನವನ್ನು ಮುಡಿಪಾಗಿಟ್ಟರು.

ಮಹಿಳೆಯೊಬ್ಬಳು ತಾನು ತಲುಪಬಹುದಾದ ಎತ್ತರ ಬಿತ್ತರಗಳು ವಾಸ್ತವವಾಗಿ ಸಾಕಾರಗೊಂಡ ಒಂದು ಅದ್ಭುತವೇ ಶ್ರೀಮಾತೆ ಎಂಬ ಸೋದರಿ ನಿವೇದಿತಾಳ ಹೇಳಿಕೆಯಲ್ಲಿ ಉತ್ಪ್ರೇಕ್ಷೆಯೇನಿಲ್ಲ. ಶ್ರೀಶಾರದಾದೇವಿ ಒಂದು ಹಳ್ಳಿಯಲ್ಲಿ ಒಂದು ಸಾಮಾನ್ಯ ಕುಟುಂಬದಲ್ಲಿ ಜನಿಸಿದರು. ಒಂದು ಮನೆಯ ಸಾಧಾರಣ ಸುಖ ದುಃಖಗಳನ್ನು ಎಲ್ಲರಂತೆ ಇವರೂ ಪ್ರತ್ಯಕ್ಷವಾಗಿ ಅನುಭವಿಸಿದರು. ಹಿರಿಯ ಮಗಳಾಗಿದ್ದರಿಂದ ಚಿಕ್ಕಂದಿನಿಂದಲೆ ಮನೆಯ ದಿನನಿತ್ಯದ ಕೆಲಸಗಳಲ್ಲಿ ತಾಯಿ ತಂದೆಯರಿಗೆ ಬೆಂಬಲವಾಗಿದ್ದರು. ವಿದ್ಯಾಭ್ಯಾಸದ ಅನುಕೂಲವಿಲ್ಲದಿದ್ದ ಆ ಹಳ್ಳಿಯ ವಾತಾವರಣದಲ್ಲಿ ಬೆಳೆದಿದ್ದರೂ, ತಮ್ಮ ತೀಕ್ಷ್ಣ ಬುದ್ಧಿಯಿಂದ ಜಗತ್ತನ್ನು ಅರಿಯಲು ಚಿಕ್ಕ ವಯಸ್ಸಿನಿಂದಲೇ ತೊಡಗಿದ್ದರು. ಈ ವಿಶೇಷವಾದ ಅರಿವಿನೊಂದಿಗೇ ತಮ್ಮ ತಂದೆತಾಯಿಯರ ತ್ಯಾಗ, ವಿನಯ, ಸಹಿಷ್ಣುತೆ ಮುಂತಾದ ಸದ್ಗುಣಗಳನ್ನು ತಮ್ಮಲ್ಲಿ ಅಳವಡಿಸಿಕೊಂಡು ತಮ್ಮ ವ್ಯಕ್ತಿತ್ವವನ್ನು ತಾವೇ ರೂಪಿಸಿಕೊಳ್ಳುತ್ತಿದ್ದರು. ಭವಿಷ್ಯಜೀವನದಲ್ಲಿ ಅವರು ವಹಿಸುವ ಮಹತ್ವದ ಪಾತ್ರದ ಭದ್ರವಾದ ಬುನಾದಿಗೆ ತಯಾರಿ ಇಲ್ಲಿಯೇ ನಡೆದಿತ್ತು.

ಆಗಿನ ಹಳ್ಳಿಯ ಸಂಪ್ರದಾಯದಂತೆ ತಮ್ಮ ಐನೇ ವಯಸ್ಸಿನಲ್ಲಿಯೇ ಶ್ರೀರಾಮಕೃಷ್ಣರೊಂದಿಗೆ ಇವರ ವಿವಾಹ ನಡೆಯಿತು. ಆದರೆ ವಿವಾಹದ ನಂತರವೂ ಶ್ರೀರಾಮಕೃಷ್ಣರು ದಕ್ಷಿಣೇಶ್ವರದಲ್ಲಿ ಸಾಧನೆಗಳಲ್ಲಿ ಮುಳುಗಿ ದೈವೋನ್ಮತ್ತರಾಗಿದ್ದರು. ಬಾಹ್ಯ ಪ್ರಪಂಚವೆಂಬುದೇ ಅವರ ಪಾಲಿಗೆ ಇಲ್ಲವಾಗಿತ್ತು. ಇತ್ತ ವರುಷಗಳು ಉರುಳಿದಂತೆ ಶ್ರೀಶಾರದಾದೇವಿ ಯೌವನಕ್ಕೆ ಕಾಲಿಟ್ಟರೂ ತವರುಮನೆಯಲ್ಲೇ ಇದ್ದುದನ್ನು ಕಂಡು ಹಳ್ಳಿಯ ಜನ ಕುಹಕವಾಡತೊಡಗಿದರು. ಕೆಲವರ ಮಾತುಗಳಲ್ಲಿರುತ್ತಿದ್ದ ವ್ಯಂಗ್ಯ, ಮತ್ತೆ ಕೆಲವರ ಅನುಕಂಪೆಯ ನುಡಿಗಳು ಅವರನ್ನು ತೀವ್ರವಾಗಿ ನೋಯಿಸುತ್ತಿದ್ದರೂ ಅವರು ಕಂಗಾಲಾಗಲಿಲ್ಲ. ಎಲ್ಲ ನೋವನ್ನೂ ಮೌನವಾಗಿ ಸಹಿಸಿ, ತಮ್ಮಲ್ಲೇ ಒಂದು ತೀರ್ಮಾನಕ್ಕೆ ಬಂದರು. ಆತ್ಮನಿರ್ಭರತೆಯಿಂದ ಧೈರ್ಯವಾಗಿ ಕಲ್ಕತ್ತದಂತಹ ದೊಡ್ಡ ನಗರಕ್ಕೆ ಹೋಗಿ ಪತಿಯನ್ನು ಸಂಧಿಸಿ ಅವರ ಬಳಿಯೇ ಇರುವ ಶ್ರೀಮಾತೆಯ ತೀರ್ಮಾನ—ಸ್ತ್ರೀಯೊಬ್ಬಳು ತನ್ನ ಜೀವನದ ಅತ್ಯಂತ ವಿಷಮವಾದ ಸನ್ನಿವೇಶದಲ್ಲಿ ಕಂಗಾಲಾಗದೆ ಸಂದಿಗ್ಧ ಪರಿಸ್ಥಿತಿಯನ್ನು ಧೈರ್ಯವಾಗಿ ಎದುರಿಸಿ ಸಮಸ್ಯೆಗೆ ಪರಿಹಾರವನ್ನು ತಾನೇ ಕಂಡುಕೊಳ್ಳುವ ಪ್ರೌಢಿಮೆಯನ್ನು ತೋರಿಸುತ್ತದೆ.

ಈ ಮುಂಚೆ ಕಾಮಾರಪುಕುರದಲ್ಲಿ ಶ್ರೀರಾಮಕೃಷ್ಣರನ್ನು ಸಂಧಿಸಿದಾಗ ಅವರು ಆಗ ತಾನೇ ಅರಳುತ್ತಿದ್ದ ಶ್ರೀಮಾತೆಯ ಮುಂದೆ ಅಧ್ಯಾತ್ಮಜೀವನದ ಒಂದು ಹೊಸ ದಿಗಂತವನ್ನೇ ತೆರೆದಿಟ್ಟಿದ್ದರಿಂದ ಅವರನ್ನು ಅರ್ಥಮಾಡಿಕೊಳ್ಳುವುದು ಶ್ರೀಮಾತೆಗೇನೂ ಕಷ್ಟವಾಗಲಿಲ್ಲ. ಬದುಕಿನ ಸೂಕ್ಷ್ಮತೆಗಳ ಸಂವೇದನೆಗೆ ಮತ್ತೊಂದು ಹೆಸರಾದ ಶ್ರೀಮಾತೆ ಶ್ರೀರಾಮಕೃಷ್ಣರ ದಿವ್ಯವಾದ ಬದುಕಿಗೆ ಸ್ಪಂದಿಸಿ, ಅದರಲ್ಲಿ ಸಹಭಾಗಿನಿಯಾಗಲು ದೈವವಿತ್ತ ಅವಕಾಶವನ್ನು ಕೃತಜ್ಞತೆಯಿಂದ ಸ್ವೀಕರಿಸಿ, ತಮ್ಮ ಬದುಕನ್ನು ಅಂತೆಯೇ ರೂಪಿಸಿಕೊಳ್ಳಲು ಸನ್ನದ್ಧರಾದರು.

ಈ ನಶ್ವರವಾದ ಬದುಕಿನ ಉದ್ದೇಶ, ಜಗತ್ತು ನಮ್ಮ ಮುಂದೆ ಒಡ್ಡುವ ಪ್ರಲೋಭನಕಾರಿಯಾದ ಸುಖಭೋಗಗಳನ್ನು ಅನುಭವಿಸುವುದಲ್ಲ. ಬದಲಾಗಿ ಬದುಕಿಗೆ ದಿವ್ಯವಾದ ಉದ್ದೇಶವೊಂದಿದೆ. ಅದೇ ಆತ್ಮಸಾಕ್ಷಾತ್ಕಾರ ಅಥವಾ ನಮ್ಮ ನೈಜ ಸ್ವರೂಪದ ಪ್ರತ್ಯಕ್ಷ ಅನುಭವವನ್ನು ಪಡೆದು ದಿವ್ಯಪ್ರಜ್ಞೆಯ ಬಾಳನ್ನು ಸಾಗಿಸುವುದು. ಅಂತೆಯೇ ದಕ್ಷಿಣೇಶ್ವರ ಕಾಳಿ ಮಂದಿರದಲ್ಲಿರುವ ತಮ್ಮ ಪತಿಯ ನಿವಾಸದ ಪಕ್ಕದಲ್ಲೇ ಇದ್ದ 'ನಹಬತ್' ನಲ್ಲಿ (ವಾದ್ಯಗಳನ್ನು ನುಡಿಸುವ ಚಿಕ್ಕ ಕೋಣೆ) ಮೌನವಾಗಿ ತಮ್ಮ ಧ್ಯಾನಜೀವನವನ್ನು ನಡೆಸತೊಡಗಿದರು. ಮಹಾತ್ಯಾಗಮೂರ್ತಿಯಾದ ಶ್ರೀರಾಮಕೃಷ್ಣರ ಸಹಧರ್ಮಿಣಿಯಾಗಿ ಶ್ರೀಮಾತೆ ತ್ಯಾಗದ ಮಹೋನ್ನತ ಆದರ್ಶವನ್ನು ತಮ್ಮ ಜೀವನದ ಉಸಿರಾಗಿಸಿಕೊಂಡಿದ್ದರು. ಆದರ್ಶಮಯವಾದ ತಮ್ಮ ಪತಿಯ ಬದುಕಿನಲ್ಲಿ ಸಹಕರಿಸುವುದರಲ್ಲೇ ತಮ್ಮ ಸ್ವಂತ ಸುಖ ಸಂತೋಷಗಳನ್ನು ಕಾಣುತ್ತಿದ್ದರು. ಅನೇಕ ಬಗೆಯ ಅಸೌಕರ್ಯಗಳು, ಅನಾನುಕೂಲಗಳಿದ್ದರೂ ಪತಿಯ ಸಾನ್ನಿಧ್ಯದಲ್ಲಿ ಕಳೆದ ಆ ದಿನಗಳು ಶ್ರೀಮಾತೆಯ ಬದುಕಿನ ಬಹು ಮುಖ್ಯವಾದ ದಿನಗಳಾಗಿದ್ದವು.

ಶ್ರೀರಾಮಕೃಷ್ಣರ ಮಹಾಸಮಾಧಿಯ ನಂತರ, ಪತಿದೇವರ ಆದೇಶದಂತೆ ಶ್ರೀಮಾತೆ ಮೊದಲು ಕಾಮಾರಪುಕುರಲ್ಲಿ ಪತಿಯ ಗೃಹದಲ್ಲಿ ವಾಸಿಸತೊಡಗಿದರು. ಅವರ ಸಹೋದರರು ಸ್ವಾರ್ಥಲೋಭಗಳಿಂದ ಕೂಡಿ ತಮ್ಮ ಸ್ವಂತ ಅಕ್ಕನಿಗೆ ನೆರವಾಗುವುದಿರಲಿ, ಅವರನ್ನೇ ಹಣಕ್ಕಾಗಿ ಪೀಡಿಸತೊಡಗಿದರು. ಇವೆಲ್ಲ ಪರಿಸ್ಥಿತಿಗಳೂ ಶ್ರೀಮಾತೆಗೆ ಸಂಸಾರದ ಘೋರತೆ ಹಾಗೂ ವಿಷಮತೆಗಳನ್ನು ನಿಕಟವಾಗಿ ಪರಿಚಯಿಸಿತು. ಮುಂದೆ ಶ್ರೀರಾಮಕೃಷ್ಣ ಮಠದ ಸ್ಥಾಪನೆಯಾದ ಮೇಲೆ ಶ್ರೀಮಾತೆಯ ವಾಸಕ್ಕಾಗಿ ಬಾಗ್ ಬಜಾರಿನ ಒಂದು ಮನೆಯಲ್ಲಿ ವ್ಯವಸ್ಥೆ ಮಾಡಲಾಯಿತು.

ಒಂದು ಕಡೆ ಶ್ರೀರಾಮಕೃಷ್ಣರ ತ್ಯಾಗಿಶಿಷ್ಯ ಸಂನ್ಯಾಸಿಗಳಿಗೆ, ಸಾಧಕರಿಗೆ ಸಂಘಜನನಿಯಾಗಿ, ಗುರುವಾಗಿ ಸಹಸ್ರಾರು ಆಧ್ಯಾತ್ಮಿಕ ಪಿಪಾಸುಗಳಿಗೆ ಏಕೈಕ ಆಸರೆಯಾಗಿದ್ದರೆ ಮತ್ತೊಂದು ಕಡೆ ಎಷ್ಟು

ಕೊಟ್ಟರೂ, ಏನು ಸಹಾಯ ಮಾಡಿದರೂ ತೃಪ್ತರಾಗದೆ ವಿಷಯಾಸಕ್ತರಾಗಿ ಧನಪಿಶಾಚಿಗಳಂತಿದ್ದ, ತಾವೇ ಕೈಯಾರೆ ಬೆಳೆಸಿದ ಸೋದರರಿದ್ದರು. ಹೀಗಾಗಿ ಬದುಕಿನ ಈ ವೈರುಧ್ಯತೆಗಳ ಕುರಿತು ಶ್ರೀಮಾತೆ ಅದ್ಭುತವಾದ ಸಹಿಷ್ಣುತಾ ಭಾವವನ್ನು ಬೆಳೆಸಿಕೊಂಡಿದ್ದರು. ಕೋಲಾಹಲವನ್ನು ಉಂಟುಮಾಡುತ್ತಿದ್ದವರ ನಡುವೆ ಬದುಕುತ್ತಿದ್ದರೂ, ಯಾವ ಉದ್ವೇಗ ಆತಂಕಗಳಿಲ್ಲದ ಶಾಂತಮಯವಾದ ಜೀವನವನ್ನು ನಡೆಸುವ ಜೀವನಕೌಶಲ ಅವರಿಗೆ ಸಿದ್ಧಿಸಿತ್ತು. ಉದ್ವೇಗ, ಆತಂಕ, ಒತ್ತಡ, ಭಯ, ನಿರಾಶೆಯಿಂದ ತೊಳಲಾಡುತ್ತಿರುವ ಆಧುನಿಕ ಮಹಿಳೆಗೆ ಶ್ರೀಮಾತೆಯ ಈ ಸಮಚಿತ್ತತೆಯ ಆದರ್ಶ ಅನುಕರಣೀಯ. ಅಧ್ಯಾತ್ಮದ ಉತ್ತುಂಗ ಶಿಖರಗಳನ್ನು ತಲುಪಿದ್ದರೂ ಸಾಧಾರಣ ಮಹಿಳೆಯಂತೆ ಲೋಕರೂಢಿಗೆ ಸಲ್ಲಬೇಕಾದ ಮಾನ್ಯತೆಯನ್ನು ನೀಡುತ್ತಿದ್ದರು. ಬಂಧುಗಳ, ಭಕ್ತರ ಜೀವನದಲ್ಲಿ ರೋಗ, ಮರಣ ಮುಂತಾದ ದುಃಖಗಳು ಒದಗಿದಾಗ ಸಾಮಾನ್ಯರಂತೆಯೇ ದುಃಖಿಸುತ್ತಿದ್ದರು. ಅವರ ಶ್ರೇಯೋಭಿವೃದ್ಧಿಯನ್ನು ಕಂಡು ಆನಂದಿಸುತ್ತಿದ್ದರು, ಹೆಮ್ಮೆಪಡುತ್ತಿದ್ದರು. ಇಷ್ಟಾಗಿಯೂ ಅವರ ಸ್ವಭಾವಕ್ಕೆ ಸಹಜವಾದ ನಿರ್ಲಿಪ್ತತೆ, ಸಹಿಷ್ಣುತೆ ಅವರ ವ್ಯಕ್ತಿತ್ವದಲ್ಲಿ ಎದ್ದು ಕಾಣುತ್ತಿದ್ದವು.

ಶ್ರೀಮಾತೆಯ ಜೀವನದಲ್ಲಿ ಕಂಡುಬರುವ ಮತ್ತೊಂದು ಉಚ್ಚ ಆದರ್ಶವೆಂದರೆ ಸ್ತ್ರೀಸಹಜವಾದ ಮಾತೃಭಾವವನ್ನು ದೈವೀ ಸ್ತರಕ್ಕೇರಿಸಿದುದು. ಶ್ರೀರಾಮಕೃಷ್ಣರು ಎಲ್ಲ ಸ್ತ್ರೀಯರನ್ನು ಜಗನ್ಮಾತೆಯ ಅಂಶವಾಗಿ ಕಂಡರು. ಇದು ಅವರ ಜೀವನದ ಮುಖ್ಯ ಸಂದೇಶವೂ ಆಗಿತ್ತು. ಪ್ರತಿಯೊಬ್ಬ ಪುರುಷನೂ ಸ್ತ್ರೀಯರನ್ನು ಮಾತೃಭಾವದಿಂದ ನೋಡುವುದು ಅವಶ್ಯವೆಂದು ಅವರ ಸಂದೇಶವಾದರೆ, ತನ್ನ ಮಾತೃಹೃದಯದಿಂದ ಜಗತ್ತನ್ನೆಲ್ಲ ತನ್ನದಾಗಿ ಮಾಡಿಕೊಳ್ಳುವುದೇ ಸ್ತ್ರೀಯ ಕರ್ತವ್ಯವೆಂದು ಶ್ರೀಮಾತೆ ತಮ್ಮ ಜೀವನದಿಂದ ತೋರಿಸಿದರು. ಮುಂದೆ ವಿದೇಶಗಳಲ್ಲಿ ಹಾಗೂ ಭಾರತಾದ್ಯಂತ ಸ್ವಾಮಿ ವಿವೇಕಾನಂದರ ಮೂಲಕ ಶ್ರೀರಾಮಕೃಷ್ಣರ ಜೀವನ ಸಂದೇಶಗಳು ತಲುಪಿ ಜನರು ಶ್ರೀಮಾತೆಯವರನ್ನು ಸಂದರ್ಶಿಸಲು ಬಂದಾಗ ಎಲ್ಲರನ್ನೂ ತಮ್ಮವರನ್ನಾಗಿಸಿಕೊಂಡದ್ದು ತಮ್ಮ ಅಪಾರವಾದ ಸ್ನೇಹ, ಕರುಣೆಗಳಿಂದ ಕೂಡಿದ ಮಾತೃತ್ವದಿಂದಲೇ. ಇದು ಸ್ತ್ರೀಯರ ಒಂದು ಅತಿ ಪ್ರಧಾನವಾದ ಗುಣ. ಸ್ತ್ರೀಯಿಂದಲೇ ಒಂದು ಮನೆಯ ಅಥವಾ ಒಂದು ನಾಡಿನ ಉದ್ಧಾರ ಸಾಧ್ಯ. ಈ ಆಧುನಿಕ ಜಗತ್ತಿನ ಜನರ ಕಲುಷಮಯವಾದ ಜೀವನವು ಪಾವನವಾಗಬೇಕಾದರೆ ಸ್ತ್ರೀಯರ ಪವಿತ್ರವೂ, ಅತ್ಯುನ್ನತವೂ ಆದ ಈ ಮಾತೃತ್ವದಿಂದಲೇ. ಶ್ರೀಮಾತೆ ಆಧುನಿಕ ಮಹಿಳೆಯ ಮುಂದಿರಿಸಿದ ಈ ಮಾತೃತ್ವದ ಆದರ್ಶದಿಂದ ಮಹಿಳೆಯು ತನ್ನ ಜೀವನವನ್ನು ಬೆಳಗಿಸಿಕೊಳ್ಳುವುದು ಮಾತ್ರವಲ್ಲದೆ ಜಗತ್ತಿಗೂ ಶಾಂತಿಯನ್ನು ನೀಡಬಲ್ಲಳು.

ನಾಣ್ಯದ ಎರಡು ಮುಖಗಳಿದ್ದಂತೆ ಪುರುಷನೂ ಪ್ರಕೃತಿಯೂ ಸೇರಿಯೇ ಈ ಜಗತ್ತು. ಸಾಮಾಜಿಕ ಚಟುವಟಿಕೆಗಳಲ್ಲಿ ಇಬ್ಬರಿಗೂ ಸಮಾನವಾದ ಪಾತ್ರವಿದೆ. ಇದರ ಅರ್ಥ ಸ್ತ್ರೀಯು ಪುರುಷನೊಂದಿಗೆ ಪೈಪೋಟಿಸಿ ಪುರುಷ ಧರ್ಮವನ್ನು ಅನುಸರಿಸಬೇಕೆಂದಲ್ಲ. ಸಮಾಜದಲ್ಲಿ ಪುರುಷನಿಗೊಂದು ಪಾತ್ರವಿದ್ದರೆ, ಸ್ತ್ರೀಗೆ ಅವಳದೇ ಆದ ಒಂದು ಸ್ಥಾನವಿದೆ, ಅವಳದೇ ಆದ ವಿಶಿಷ್ಟ ಮನೋಧರ್ಮವಿದೆ. ಇಬ್ಬರೂ ಒಂದೇ ತರಹದ ಕೆಲಸ ಮಾಡುತ್ತಿದ್ದರೂ ಇಬ್ಬರಿಗೂ ಅವರದೇ ಆದ ಸ್ವಧರ್ಮವಿದೆ. ಶ್ರೀರಾಮಕೃಷ್ಣರ ಮತ್ತು ಶ್ರೀಮಾತೆಯ ಬದುಕಿನಲ್ಲಿಯೂ ಅದನ್ನೇ ಕಾಣುತ್ತೇವೆ. ಜಗತ್ಕಲ್ಯಾಣವೇ ಇಬ್ಬರ ಉದ್ದೇಶವಾದರೂ ಅದನ್ನು ಸಾಧಿಸಿದ ರೀತಿಯಲ್ಲಿ ಭಿನ್ನತೆಯಿದೆ. ಶ್ರೀಮಾತೆ ತಮ್ಮದೇ ಆದ ರೀತಿಯಲ್ಲಿ ಅದನ್ನು ಸಾಧಿಸಿದರು. ಮನುಷ್ಯ ಜೀವನದ ಉದ್ದೇಶ ಸ್ತ್ರೀಪುರುಷರಿಗೆ ಒಂದೇ ಆಗಿದೆ. ಅದನ್ನು ಪಡೆಯುವ ಅರ್ಹತೆಯೂ, ಸ್ವಾತಂತ್ರ್ಯವೂ ಸಮಾನವಾಗಿದೆ. ಆದರೆ ಮಾರ್ಗಗಳಲ್ಲಿ ವ್ಯತ್ಯಾಸವಿದೆ. ಸ್ತ್ರೀಯು ತನ್ನದೇ ಆದ ವ್ಯಕ್ತಿತ್ವವನ್ನು ರೂಪಿಸಿಕೊಂಡರೆ, ಪುರುಷನೊಂದಿಗೆ ಹೆಗಲು ಕೊಟ್ಟು ಜಗತ್ತಿಗೆ ಶ್ರೇಯಸ್ಕರವಾದ ಚಟುವಟಿಕೆಗಳಲ್ಲಿ ತೊಡಗಿ ಜೀವನದ ಪರಮ ಸತ್ಯವನ್ನು ಸಾಕ್ಷಾತ್ಕರಿಸಿಕೊಳ್ಳಬಹುದು. ಶ್ರೀಮಾತೆ ತಮ್ಮ ಬದುಕಿನ ಮೂಲಕ ನಾರೀಕುಲಕ್ಕೆ ನೀಡಿರುವ ಪ್ರಮುಖ ಸಂದೇಶವಿದು.

## ಶ್ರೀಮಾತೆಯಿಂದ ಪ್ರಭಾವಿತವಾದ ನಾರೀಸಮೂಹ

ಶ್ರೀಮಾತೆಯ ಜೀವಿತ ಸಮಯದಲ್ಲಿ ಅದೆಷ್ಟು ಜನ ನಾರಿಯರು ಅವರ ಸಂಪರ್ಕಕ್ಕೆ ಬಂದು ತಮ್ಮ ಜೀವನವನ್ನು ಧನ್ಯಗೊಳಿಸಿಕೊಂಡಿದ್ದರು! ಪ್ರಥಮವಾಗಿ ಅವರ ತಾಯಿ ಶ್ಯಾಮಾಸುಂದರಿ ದೇವಿ. ಮಗಳು ಹುಟ್ಟುವ ಮೊದಲೇ ಅನೇಕ ದಿವ್ಯ ದರ್ಶನ ಅನುಭವಗಳನ್ನು ಪಡೆದಿದ್ದರು. ಶಾರದಾದೇವಿ ಸಾಮಾನ್ಯ ಹುಡುಗಿಯಲ್ಲವೆಂದು ತಿಳಿದಿದ್ದರೂ ತಾಯಿಯ ಮಮತೆಯಿಂದ ಅದನ್ನು ಮರೆತು ಮಗಳನ್ನು ಪೋಷಿಸಿದ್ದರು. ಶ್ರೀಮಾತೆ ತಮ್ಮ ದಿವ್ಯತೆಯನ್ನು ಗೋಪ್ಯವಾಗಿಟ್ಟು, ತಮಗೆ ಜನ್ಮ ಕೊಟ್ಟ ಜನನಿಗೆ ಸಲ್ಲಬೇಕಾದ ಎಲ್ಲ ಸ್ಥಾನ, ಮಾನಗಳನ್ನು ಕೊಟ್ಟು ಪ್ರೀತಿವಿಶ್ವಾಸಗಳ ಮಹಾಪೂರವನ್ನೇ ಹರಿಸಿದ್ದರು. ಅಲೌಕಿಕಳಾದ ಮಗಳಿಗೂ ತಾಯಿಗೂ ಇದ್ದ ಬಾಂಧವ್ಯ ನಿಜವಾಗಿಯೂ ಮಧುರವಾಗಿತ್ತು. ಮುಂದೆ ಪತಿಯ ತಾಯಿ ಚಂದ್ರಮಣೀ ದೇವಿ ತೋರಿದ ಸ್ನೇಹ ಆದರಗಳೂ ಅಪೂರ್ವವಾಗಿತ್ತು. ಪತಿಯ ಸಹೋದರರ ಪತ್ನಿಯರಿಗೆ ಉತ್ತಮ ಓರಗಿತ್ತಿಯಾಗಿದ್ದರು ಹಾಗೂ ಸ್ವಂತ ಸಹೋದರರ ಪತ್ನಿಯರಿಗೆ ಉತ್ತಮ ಅತ್ತಿಗೆಯಾಗಿದ್ದರು. ಇವರೆಲ್ಲ ಪಕ್ಕಾ ಸಂಸಾರಿಗಳಾಗಿದ್ದರೂ ಸಾಧಾರಣ ಕೌಟುಂಬಿಕ ಜೀವನಕ್ಕೆ ಬೇಕಾದ ರೀತಿಯಲ್ಲಿ ಅವರೊಡನೆ ವ್ಯವಹರಿಸುತ್ತಿದ್ದರು. ಗೌರಿಮಾ, ಯೋಗಿನ್‌ಮಾ, ಗೋಲಾಪ್‌ಮಾ ಮುಂತಾದ ಶ್ರೀರಾಮಕೃಷ್ಣರ ಶಿಷ್ಯೆಯರೂ, ಮಹಾತಪಸ್ವಿನಿಯರೂ ಶ್ರೀಮಾತೆಯ ನೆರಳಿನಲ್ಲಿ ಆಶ್ರಯ ಪಡೆದು ಅವರೊಡನೆ ಅಂಗದೇವತೆಗಳಂತಿದ್ದು ತಮ್ಮ ಆಧ್ಯಾತ್ಮಿಕ ವ್ಯಕ್ತಿತ್ವವನ್ನು ಅರಳಿಸಿಕೊಂಡರು. ಶ್ರೀರಾಮಕೃಷ್ಣರ ಗೃಹಸ್ಥ ಶಿಷ್ಯರ ಪತ್ನಿಯರಾದ ಬಲರಾಮ ಬಸುವಿನ ಪತ್ನಿ, ಮಾಸ್ಟರ್ ಮಹಾಶಯನ ಪತ್ನಿ ಮೊದಲಾದವರು ಕೊನೆಯವರೆಗೂ

ಶ್ರೀಮಾತೆಯ ಮಡಿಲಿನಲ್ಲಿಯೇ ಆಶ್ರಯ ಪಡೆದಿದ್ದರು. ಬಾಲ ವಿಧವೆ ಕ್ಷಿರೋದಾ ಬಾಲಾ ಮತ್ತು ಸರಯೂಬಾಲಾಳಂತಹ ಅವಿವಾಹಿತ ಸ್ತ್ರೀಯರ ಬಾಳಿಗೆ ಶ್ರೀಮಾತೆ ಏಕೈಕ ಆಸರೆಯಾಗಿದ್ದರು.

ಭಾರತದ ನಾರೀಕುಲಕ್ಕಷ್ಟೇ ಶ್ರೀಮಾತೆಯ ಪ್ರಭಾವ ಸೀಮಿತವಾಗಿರಲಿಲ್ಲ. ಹೊರನಾಡಿನಿಂದ ಬಂದ ಸೋದರಿ ನಿವೇದಿತಾ, ಕ್ರಿಸ್ಟಿನ್ ಮೊದಲಾದವರು ಶ್ರೀಮಾತೆಯಿಂದ ಪಡೆದ ಸ್ನೇಹ, ವಾತ್ಸಲ್ಯಗಳ ಸಿಂಚನದಿಂದ ತಮ್ಮ ಬಾಳನ್ನು ಧನ್ಯವಾಗಿಸಿಕೊಂಡರು. ಶ್ರೀಮಾತೆಯ ಜೀವಿತಕಾಲದ ಅನಂತರ ಅವರ ಹೆಸರಿನಲ್ಲಿ ಅಸ್ತಿತ್ವಕ್ಕೆ ಬಂದ 'ಶ್ರೀಶಾರದಾಮಠ'ದ ಪ್ರಥಮ ಅಧ್ಯಕ್ಷೆಯಾಗಿದ್ದ ಪ್ರವ್ರಾಜಿಕಾ ಭಾರತೀಪ್ರಾಣಾ ಮಾತಾಜಿ ಶ್ರೀಮಾತೆಯ ಜೊತೆಯಲ್ಲಿದ್ದು ಅವರ ಸೇವೆಯನ್ನು ಮಾಡುವ ಅಪೂರ್ವ ಸುಯೋಗವನ್ನು ಪಡೆದಿದ್ದರು. ಶ್ರೀಮಾತೆಯ ನಿಕಟವರ್ತಿಯಾಗಿ ಸಂನ್ಯಾಸಿನಿಯ ಬದುಕಿಗೆ ಬೇಕಾದ ಆಧ್ಯಾತ್ಮಿಕ ಪ್ರೇರಣೆಯನ್ನು ಅವರಿಂದ ಪಡೆದು ಮುಂದೆ ಶಾರದಾಮಠದಲ್ಲಿ ಅವುಗಳನ್ನು ಅಳವಡಿಸುವುದರ ಮೂಲಕ ಸಂನ್ಯಾಸಿನಿಯರ ಪರಂಪರೆಗೆ ಹೊಸ ಚಾಲನೆ ನೀಡಿದರು. ಆಧುನಿಕ ಕಾಲದ ಮಹಿಳೆಯರು ಜೀವನದ ಯಾವುದೇ ಕ್ಷೇತ್ರದಲ್ಲಿರಲಿ, ಶ್ರೀಮಾತೆಯ ದಿವ್ಯ ಜೀವನದಿಂದ ತಮ್ಮ ಬದುಕಿಗೆ ಬೇಕಾದ ಪ್ರೇರಣೆಯನ್ನು ಪಡೆದು ಧನ್ಯರಾಗಬಹುದು. ಶ್ರೀಮಾತೆಯ ಜೀವನ ಸ್ತ್ರೀಯರ ಉದ್ಧಾರ ಕಾರ್ಯಕ್ಕಾಗಿ ಮಾತ್ರ ಸೀಮಿತವಾಗಿರಲಿಲ್ಲ. ಅದೆಷ್ಟೋ ಪುರುಷಭಕ್ತರೂ ಅಧ್ಯಾತ್ಮಿಕ ಸಾಧಕರೂ ಶ್ರೀಮಾತೆಯ ದಿವ್ಯಸ್ಪರ್ಶದಿಂದ ತಮ್ಮ ಬದುಕನ್ನು ಪಾವನವಾಗಿಸಿಕೊಂಡಿದ್ದರು.

ಶ್ರೀಮಾತೆಯ ಬದುಕಿನ ಮತ್ತೊಂದು ವೈಶಿಷ್ಟ್ಯವೆಂದರೆ ಅವರಲ್ಲಿಗೆ ಬರುತ್ತಿದ್ದ ವಿಭಿನ್ನ ಜನರಿಗೆ ಅವರಿಗೆ ಬೇಕಾದ ರೀತಿಯಲ್ಲಿ ಉಪದೇಶವನ್ನು ನೀಡುತ್ತಿದ್ದುದು. ಹೆಣ್ಣುಮಕ್ಕಳಿಗೆ ಚೆಲ್ಲು ಚೆಲ್ಲಾಗಿರದೆ ಗಂಭೀರವಾಗಿರಬೇಕೆಂದು, ಪ್ರತಿಯೊಂದು ಕೆಲಸವನ್ನೂ ಅಚ್ಚುಕಟ್ಟಾಗಿ ಮಾಡಬೇಕೆಂದು ಹೇಳಿದರೆ, ಪುರುಷರಿಗೆ ಯಾವಾಗಲೂ ಧೀರರಾಗಿ, ಸಾಹಸಿಗಳಾಗಿ, ಉದ್ಯಮಶೀಲರಾಗಿರಬೇಕೆಂದು ಹೇಳುತ್ತಿದ್ದರು. ಸಂನ್ಯಾಸಜೀವನ ಬಯಸಿದವರಿಗೆ ಪ್ರೋತ್ಸಾಹ ನೀಡುತ್ತಿದ್ದರು. ಪುರುಷನೇ ಆಗಲಿ ಸ್ತ್ರೀಯೇ ಆಗಲಿ ತಪ್ಪುದಾರಿಯಲ್ಲಿ ನಡೆಯುತ್ತಿದ್ದರೆ ಅವರಿಗೆ ಸ್ನೇಹಪೂರ್ವಕವಾದ ಮಾತುಗಳಿಂದ ಸನ್ಮಾರ್ಗವನ್ನು ತೋರುತ್ತಿದ್ದರು.

ಈ ಜಗತ್ತಿನ ಆಗುಹೋಗುಗಳ, ಸುಖದುಃಖಗಳ ಹಿಂದೆ ಶೋಕಮೋಹಾತೀತವಾದ ಪರಮ ಸತ್ಯವೊಂದಿದೆ. ಆ ಪರಮ ಸತ್ಯವನ್ನು ಅಥವಾ ಭಗವತ್ ಸಾನ್ನಿಧ್ಯವನ್ನು ಅರಿತು ಜೀವಿಸುವುದೇ ಜೀವನದ ಆದರ್ಶ. ಇದನ್ನು ಪಡೆಯಲು ಪ್ರತಿಯೊಬ್ಬ ವ್ಯಕ್ತಿಯೂ ತನ್ನ ಬದುಕನ್ನು ಸಂಸ್ಕಾರಗೊಳಿಸಿಕೊಳ್ಳಬೇಕು ಎಂಬುದೇ ಅವರ ಉಪದೇಶದ ತಿರುಳಾಗಿತ್ತು. ಪ್ರತಿಯೊಬ್ಬ ವ್ಯಕ್ತಿಗೂ, ಅವನು ವಿಕಾಸದ ಯಾವುದೇ ಹಂತದಲ್ಲಿರಲಿ, ಅವನು ಅಲ್ಲಿಂದಲೇ ಜೀವಿತದ ಆದರ್ಶದ ಕಡೆಗೆ ಹಜ್ಜೆ ಹಾಕಲು ನೆರವಾಗುತ್ತಿದ್ದರು. ಅವರ ಈ ಅನುಗ್ರಹ ಶಕ್ತಿ ಈಗಲೂ ಜೀವಂತವಾಗಿರುವುದಕ್ಕೆ ಅನೇಕ ಸಾಧಕರ ಬದುಕೇ ಸಾಕ್ಷಿಯಾಗಿದೆ. ಶ್ರೀಮಾತೆ ತಮ್ಮ ಬದುಕು ಮತ್ತು ಸಂದೇಶಗಳ ಮೂಲಕ ತೋರಿದ ಆದರ್ಶವನ್ನು ಅನುಸರಿಸುವುದರಿಂದ ಪ್ರತಿಯೊಬ್ಬ ವ್ಯಕ್ತಿಯೂ ಜೀವನದಲ್ಲಿ ಸಫಲತೆಯನ್ನು ಕಂಡುಕೊಳ್ಳುವುದರಲ್ಲಿ ಸಂಶಯವಿಲ್ಲ.

## ಮಗುವನ್ನು ಮಡಿಲಿಗೆ ತೆಗೆದುಕೊಂಡ ಮಾತೆ

ಬೆಂಗಳೂರಿನಲ್ಲಿ ವರ್ತಕರಾಗಿದ್ದ ಶ್ರೀ ರಾಜಗೋಪಾಲ ನಾಯ್ಡು ಅವರು ಶ್ರೀಮಾತೆ ಶಾರದಾದೇವಿಯವರಿಂದ ಮಂತ್ರದೀಕ್ಷೆ ಪಡೆದಿದ್ದರು. ಆದರೆ ದೈನಂದಿನ ವ್ಯವಹಾರಗಳಲ್ಲಿ ಮುಳುಗಿಹೋದ ಅವರಿಗೆ ಸರಿಯಾದ ರೀತಿಯಲ್ಲಿ ಸಾಧನೆ ಮಾಡಲಾಗಲಿಲ್ಲ. ಈ ಕಾರಣದಿಂದ ಅವರಲ್ಲಿ ಸಂದೇಹ, ಕೊರಗು, ಹೊಯ್ದಾಟ ಉಂಟಾಯಿತು. ಅವರು ಶ್ರೀಮಾತೆಯವರಿದ್ದಲ್ಲಿಗೇ ಹೋಗಿ ತಮ್ಮ ಮನಸ್ಸಿನ ಕೊರಗನ್ನು ನಿವೇದಿಸಿಕೊಂಡರು. ಶ್ರೀಮಾತೆ ಹೇಳಿದರು, "ಹೆದರಬೇಡ, ಸರಿಯಾದ ಸಮಯ ಬಂದಾಗ ನಾನು ನಿನ್ನನ್ನು ನನ್ನ ಮಡಿಲಿಗೆ ತೆಗೆದುಕೊಳ್ಳುತ್ತೇನೆ." ಕೆಲವು ಕಾಲದ ಬಳಿಕ ಮತ್ತೆ ಅದೇ ರೀತಿ ಸಂದೇಹ ಮೂಡಿದಾಗ ಶ್ರೀಮಾತೆಯವರನ್ನು ಕಂಡು ಸಂದೇಹ ನಿವಾರಣೆ ಮಾಡಿಕೊಂಡರು. ಅವರು ನೀಡಿದ ಭರವಸೆಯಿಂದ ಅವರ ವಿಶ್ವಾಸ ಬಲಗೊಂಡಿತು. ಆದರೆ ತಮ್ಮ ವ್ಯವಹಾರ-ಜಂಜಾಟಗಳ ನಡುವೆ ಕ್ರಮಬದ್ಧ ಸಾಧನೆ ಸಾಧ್ಯವಾಗಲಿಲ್ಲ.

೧೯೨೪ರಲ್ಲಿ ಅನಾಥಾಶ್ರಮದ ಒಬ್ಬರು ಸಂನ್ಯಾಸಿಗಳೊಂದಿಗೆ, ಸುಮಾರು ೫೦ ಮಂದಿ ಭಕ್ತರ ಜೊತೆಯಲ್ಲಿ ರಾಜಗೋಪಾಲ ನಾಯ್ಡು ತಮ್ಮ ಪತ್ನಿಯನ್ನು ಕರೆದುಕೊಂಡು ಕೇದಾರ-ಬದರೀ ಯಾತ್ರೆಗೆ ಹೊರಟರು. ಬದರೀನಾಥನ ದರ್ಶನ ಮಾಡಿದಕೂಡಲೇ ನಾಯ್ಡು ಅವರಿಗೆ ಇದ್ದಕ್ಕಿದ್ದಂತೆ ಹರಿದ್ವಾರದ ಕನ್‌ಖಲ್‌ನಲ್ಲಿರುವ ರಾಮಕೃಷ್ಣ ಮಿಷನ್ ಸೇವಾಶ್ರಮಕ್ಕೆ ಹಿಂತಿರುಗಬೇಕೆಂಬ ಆಂತರಿಕ ಒತ್ತಡವುಂಟಾಯಿತು. ಕಷ್ಟಪಟ್ಟು ಅಲ್ಲಿಗೆ ಹೋದರು.

ಬಂದ ದಿನವೇ ರಾಜಗೋಪಾಲ ನಾಯ್ಡು ಪತ್ನಿಯೊಂದಿಗೆ "ಸೇವಾಶ್ರಮದ ಆಸ್ಪತ್ರೆಯಲ್ಲಿ ಬಡರೋಗಿಗಳಿಗೆ ಹಾಲು ವಿತರಣೆ ಮಾಡುವುದನ್ನು ನೋಡಿಕೊಂಡು ಬಾ" ಎಂದು ಒತ್ತಾಯಪೂರ್ವಕ ಕಳುಹಿಸಿದರು. ಪತ್ನಿ ಅತಿಥಿಗೃಹದಿಂದ ಹೊರಟು ಸ್ವಲ್ಪ ದೂರ ಹೋಗುತ್ತಿರಬೇಕಾದರೆ ಕೋಣೆಯಲ್ಲೇ ಉಳಿದ ತಮ್ಮ ಪತಿ 'ಅಮ್ಮಾ... ಅಮ್ಮಾ...' ಎಂದು ಜೋರಾಗಿ ಅತ್ತು ಕರೆಯುತ್ತಿದ್ದುದು ಕೇಳಿಸಿತು. ಒಂದೆಡೆ ಕುಳಿತು, ದೇಹವೆಲ್ಲ ಕಂಪಿಸುತ್ತ ಬಾಹ್ಯ ಜಗತ್ತಿನ ಅರಿವೇ ಇಲ್ಲದೆ, ಧಾರಾಕಾರ ಕಣ್ಣೀರು ಸುರಿಸುತ್ತ ಅವರು ಶ್ರೀಮಾತೆಯವರೊಂದಿಗೆ ಮಾತನಾಡುತ್ತಿದ್ದರು—"ಅಮ್ಮಾ,...ಅಮ್ಮಾ... ಹೇಳಿದಂತೆ ನೀನು ಬಂದೆಯಲ್ಲ..." ಹೀಗೆ ಹೇಳುತ್ತ ರಾಜಗೋಪಾಲ ನಾಯ್ಡು ಅಲ್ಲೇ ದೇಹವನ್ನು ತ್ಯಜಿಸಿದರು. ಆಶ್ರಮದ ನಿವಾಸಿಗಳು ವಿಧಿಪ್ರಕಾರ ದೇಹಕ್ಕೆ ಅಂತ್ಯಸಂಸ್ಕಾರ ಮಾಡಿದರು.